# ವಿಶ್ವ ಚೆಸ್ ನಕಾಶೆಯಲ್ಲಿ ಭಾರತದ ಯುವ ಪ್ರತಿಭೆಗಳ ಹೊಳಪು



‘ಫಿಡೆ ವಿಶ್ವಕಪ್–2023’ ವಿಶ್ವ ಚೆಸ್ ನಕಾಶೆಯಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ. ಭಾರತದ ಯುವ ಚೆಸ್ಸಿಗರು ಮುಂದಿನ ದಿನಗಳಲ್ಲಿ ಚದುರಂಗದ ಜಾಗತಿಕ ಶಕ್ತಿಯಾಗಿ ರೂಪುಗೊಳ್ಳುವ ಸ್ಪಷ್ಟ ಸೂಚನೆಯನ್ನು ‘ಫಿಡೆ ಟೂರ್ನಿ’ ನೀಡಿದೆ. ವಿಶ್ವನಾಥನ್ ಆನಂದ್ ಮೂಲಕ ಭಾರತದಲ್ಲಿ ಜನಪ್ರಿಯಗೊಂಡ ಚೆಸ್ ಶಕೆ ಈಗ ಉಚ್ಛ್ರಾಯ ಮಟ್ಟ ತಲುಪಿದೆ. ಹದಿನೆಂಟರ ಪ್ರಜ್ಞಾನಂದ ವಿಶ್ವದ ಪ್ರಬಲ ಆಟಗಾರರನ್ನು ಮಣಿಸುವ ಮೂಲಕ, ಟೂರ್ನಿಯಲ್ಲಿ ರನ್ನರ್–ಅಪ್ ಆಗುವುದರೊಂದಿಗೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಪ್ರವೇಶ ದೊರಕಿಸಿಕೊಂಡಿದ್ದಾನೆ. ಪ್ರಜ್ಞಾನಂದನ ಮೂಲಕ ಬಹು ದಿನಗಳ ನಂತರ ಭಾರತದ ಎಳೆಯರಿಗೆ ಹೊಸ ಐಕಾನ್ ದೊರೆತಂತಾಗಿದೆ. ಪ್ರಗ್ಗು ಮತ್ತು ಅವನ ಗೆಳೆಯರ ಚದುರಂಗದ ಆಟ–ಓಟ ಭಾರತದ ಎಳೆಯರಿಗೆ ಪ್ರೇರಣೆ ನೀಡುವಂತಿದೆ.

■ **ರಘುನಾಥ ಚ.ಹ.**